# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 810(913) |
| ಸದಸ್ಯರ ಹೆಸರು | : | ಡಾ|| ಎಂ.ಜಿ.ಮುಳೆ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 11.03.2026 |
| ಉತ್ತರಿಸುವ ಸಚಿವರು | : | ಕಂದಾಯ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೀದರ್ ಜಿಲ್ಲೆಯಾದ್ಯಂತ ಪ್ರಸ್ತುತ ಎಷ್ಟು ಹಕ್ಕು ಪತ್ರ (Grant Certiicate) ವಿತರಣೆಗೆ ಬಾಕಿ ಇವೆ; ಅದೇ ರೀತಿ, ರೈತರ ಜಮೀನಿನ ನಕ್ಷೆ ಪ್ರತ್ಯೇಕಿಸುವ 'ಪೋಡಿ' (Podi) ಪ್ರಕರಣಗಳ ಒಟ್ಟು ಬಾಕಿ ಸಂಖ್ಯೆ ಎಷ್ಟು; ಇವುಗಳಲ್ಲಿ 2 ವರ್ಷಕ್ಕಿಂತ ಹಳೆಯದಾದ ಪ್ರಕರಣಗಳ ಸಂಖ್ಯೆ ಎಷ್ಟು; | ಸರ್ಕಾರದ ಸುತ್ತೋಲೆ ಸಂಖ್ಯೆ:ಕಂಇ 156 ಎಸ್‌ಎಸ್‌ಎಂ 2024 ದಿನಾಂಕ:25.11.2024ರಲ್ಲಿನ ಮಾರ್ಗಸೂಚಿಯನ್ವಯ ದರಖಾಸ್ತು ಜಮೀನಿನ ಪೋಡಿ ಆಂದೋಲನ ಕಾರ್ಯ ಚಾಲ್ತಿಯಲ್ಲಿದ್ದು, 1 ರಿಂದ 5 ರಲ್ಲಿನ ಪೋಡಿ ನಮೂನೆಯಂತೆ ಒಟ್ಟು 3361 ಅರ್ಜಿಗಳು ಸೃಜನೆಯಾಗಿದ್ದು, ಅದರಲ್ಲಿ 259 ಮಂಜೂರಿದಾರರ ಅನುಬಂಧ-1 ಸ್ವೀಕೃತವಾಗಿದ್ದು, 110 ಮಂಜೂರಿದಾರರ ಅಳತೆ ಕೆಲಸ ಪೂರೈಸಿ ದುರಸ್ತಿ ಕೆಲಸ ಪೂರ್ಣಗೊಳಿಸಲಾಗಿರುತ್ತದೆ. ಉಳಿದ 149 ಮಂಜೂರಿದಾರರ ಅಳತೆ ಕೆಲಸ ನಿಯಮಾನುಸಾರ ಶೀಘ್ರವಾಗಿ ಪೂರೈಸಲಾಗುವುದು. |
| ಆ) | ಬಾಕಿ ಇರುವ ಹಕ್ಕುಪತ್ರ ಮತ್ತು ಪೋಡಿ ಪ್ರಕರಣಗಳನ್ನು ವಿಲೇವಾರಿ ಮಾಡಲು ಜಿಲ್ಲೆಯ ಪ್ರತಿ ತಾಲ್ಲೂಕಿನಲ್ಲಿ 'ಕಂದಾಯ ಅದಾಲತ್' ಅಥವಾ ವಿಶೇಷ 'ಪೋಡಿ ಮುಕ್ತ' ಶಿಬಿರಗಳನ್ನು ಆಯೋಜಿಸಲು ಸರ್ಕಾರ ಕಾಲಮಿತಿ ನಿಗದಿಪಡಿಸಿದೆಯೇ; | ಬೀದರ್ ಜಿಲ್ಲೆ ವ್ಯಾಪ್ತಿಯಲ್ಲಿ ಪೋಡಿ ಮುಕ್ತ ಗ್ರಾಮಯೋಜನೆಯ ಮೊದಲ ಹಂತದಲ್ಲಿ ಒಟ್ಟು 280 ಗ್ರಾಮಗಳನ್ನು ಭೌತಿಕವಾಗಿ ಆಯ್ಕೆ ಮಾಡಿಕೊಂಡು 54,612 ಬ್ಲಾಕ್‌ಗಳ ಅಳತೆ ಮಾಡಿ ದುರಸ್ತಿಪಡಿಸಿ ಇಂಡೀಕರಣಗೊಳಿಸಲಾಗಿದೆ. ಅಕ್ಟೋಬರ್ -2022 ರಿಂದ ಪೋಡಿ ಮುಕ್ತ ಗ್ರಾಮ ಯೋಜನೆಯನ್ನು ಮೋಜಿಣಿ ತಂತ್ರಾಂಶದ ಮುಖಾಂತರ ನಿರ್ವಹಿಸಲಾಗುತ್ತಿದೆ. ಅಕ್ಟೋಬರ್ 2022 ರ ನಂತರ ಬೀದರ್ ಜಿಲ್ಲೆಯ ವ್ಯಾಪ್ತಿಯಲ್ಲಿ ಪೋಡಿ ಮುಕ್ತ ಗ್ರಾಮ ಯೋಜನೆಯ ಪ್ರಗತಿಯು (ಪಹಣಿಯಂತೆ) ಈ ಕೆಳಕಂಡಂತಿರುತ್ತದೆ. |

| ಪ್ರಾ. ಶಿಲ್ಕು | ಸ್ವೀಕೃತಿ | ಒಟ್ಟು | ವಿಲೇ | ಒಟ್ಟು ಬಾಕಿ | ಕಂದಾಯ ಶಾಖೆಯಲ್ಲಿ | ಭೂಮಾಪನ ಶಾಖೆಯಲ್ಲಿ ಬಾಕಿ | ಅಳತೆ ಪೂರ್ಣಗೊಂಡ ಗ್ರಾಮಗಳು | ಬಾಕಿ ಗ್ರಾಮಗಳು |
|---|---|---|---|---|---|---|---|---|
| 0 | 16748 | 16748 | 14220 | 2528 | 2042 | 486 | 200 | 16 |

ರಾಜ್ಯದಲ್ಲಿ ಪ್ರಥಮ ಆದ್ಯತೆಯಾಗಿ ಸಾರ್ವಜನಿಕರು ಶುಲ್ಕ ಪಾವತಿಸಿ ಸಲ್ಲಿಸುವ 11ಇ, ತತ್ಕಾಲ್ ಪೋಡಿ, ಅಲಿನೇಷನ್, ಹದ್ದುಬಸ್ತು, ಇ-ಸ್ವತ್ತು, ಕೋರ್ಟ್ ಪ್ರಕರಣಗಳನ್ನು ಅಳತೆ ಮಾಡಲಾಗುತ್ತದೆ. ಸದರಿ ಪ್ರಕರಣಗಳು ಹೆಚ್ಚಿಗೆ ಇಲ್ಲದಿದ್ದಲ್ಲಿ ಆದ್ಯತೆ ಮೇರೆಗೆ ಪೋಡಿ ಮುಕ್ತ ಗ್ರಾಮ ಅಭಿಯಾನದಡಿಯಲ್ಲಿ ಬಾಕಿ ಪ್ರಕರಣಗಳ ಸಂಖ್ಯೆಯ ಆಧಾರದ ಮೇಲೆ ಗ್ರಾಮಗಳನ್ನು ಹಾಗೂ ಸರ್ವೆ ನಂಬರುಗಳನ್ನು ಹಂತ ಹಂತವಾಗಿ ಆಯ್ಕೆ

| | | |
|---|---|---|
| | | ಮಾಡಿಕೊಂಡು ಅಳತೆ ಕಾರ್ಯ ಪೂರೈಸಲು ಕ್ರಮ ಕೈಗೊಳ್ಳಲಾಗುತ್ತದೆ. |
| ಇ) | ಬೀದರ್ ಜಿಲ್ಲೆಯ ಎಲ್ಲಾ ಗ್ರಾಮಗಳ ಭೂ ದಾಖಲೆಗಳ (RTC, Mutation, Maps) ಡಿಜಿಟಲೀಕರಣ ಪ್ರಕ್ರಿಯೆ ಯಾವ ಹಂತದಲ್ಲಿದೆ; ಸರ್ವೆ ನಕ್ಷೆಗಳನ್ನು ಸಂಪೂರ್ಣವಾಗಿ ಡಿಜಿಟಲ್ ರೂಪಕ್ಕೆ ತರಲಾಗಿದೆಯೇ; ಇದರಿಂದ ರೈತರಿಗೆ ಆಗುವ ಅನುಕೂಲಗಳೇನು; | ಬೀದರ್ ಜಲ್ಲೆಯ ಭೂ ಮಾಪನ ಇಲಾಖೆಯಲ್ಲಿ ಡಿಜಿಟಲೀಕರಣಕ್ಕಾಗಿ ಬಾಕಿ ಇರುವ ಆಕಾರಬಂದ ಸಾಲುಗಳ ಗಣಕೀಕರಣ ಕಾರ್ಯ ಮತ್ತು ಅಭೀಲೇಖಾಲಯದಲ್ಲಿ ಪೋಡಿ ದಾಖಲೆಗಳ ಸ್ಕ್ಯಾನಿಂಗ್ ಕಾರ್ಯ ಚಾಲ್ತಿಯಲ್ಲಿದ್ದು ಶೀಘ್ರವಾಗಿ ಎಲ್ಲಾ ಸರ್ವೆ ದಾಖಲೆಗಳನ್ನು ಡಿಜಿಟಲ್ ರೂಪಕ್ಕೆ ತರಲಾಗುವುದು. ಇದರಿಂದ ಸಾರ್ವಜನಿಕರಿಗೆ ಶೀಘ್ರವಾಗಿ ಮಾಹಿತಿ ಸ್ವೀಕೃತವಾಗುದಲ್ಲದೇ ದಾಖಲೆಗಳನ್ನು ಶಿಥಿಲವಾಗದಂತೆ ಕಾಪಾಡಬಹುದಾಗಿದೆ.<br><br>ಬೀದರ್ ಜಿಲ್ಲೆಯ ಒಟ್ಟು 641 ಗ್ರಾಮ ನಕಾಶೆಗಳ ಪೈಕಿ ಈಗಾಗಲೇ ಒಟ್ಟು 639 ಗ್ರಾಮ ನಕಾಶೆಗಳನ್ನು ಡಿಜಿಟಲೀಕರಣಗೊಳಿಸಲಾಗೆದೆ. ಜಿಲ್ಲೆಯ ಒಟ್ಟು 2,57, 062 ಟಿಪ್ಪಣಿಗಳ ಪೈಕಿ 2,50,473 ಟಿಪ್ಪಣಿಗಳನ್ನೂ ಸಹ ಡಿಜಿಟಲೀಕರಣಗೊಳಿಸಲಾಗಿದೆ. ಇದರಿಂದಾಗಿ<br><br>• ನಕಲಿ ಭೂದಾಖಲೆಗಳು ಸೃಜನೆಯಾಗುವುದುನ್ನು ತಡೆಯಬಹುದು.<br>• ಭೂ ದಾಖಲೆಗಳನ್ನು ಅಕ್ರಮವಾಗಿ ತಿದ್ದುಪಡಿ ಮಾಡುವುದನ್ನು ತಡೆಯಬಹುದಾಗಿದೆ.<br>• ಭೂ ದಾಖಲೆಗಳ ನಾಶವಾಗದಂತೆ ತಡೆಯಬಹುದಾಗಿದೆ.<br><br>ಈ ಭೂದಾಖಲೆಗಳನ್ನು ಬಳಸಿ ಭೂಮಾಪಕರು ತ್ವರಿತವಾಗಿ ದೈನಂದಿನ ಅಳತೆ ಕಾರ್ಯ ಕೈಗೊಳ್ಳಬಹುದಾಗಿದೆ. |
| ಈ) | ದಾಖಲೆಗಳ ವಿಲೇವಾರಿಯಲ್ಲಿನ ವಿಳಂಬಕ್ಕೆ ತಾಂತ್ರಿಕ ಸಮಸ್ಯೆಗಳೇ ಕಾರಣವೋ ಅಥವಾ ಸರ್ವೇಯರ್‌ಗಳ ಕೊರತೆಯೇ ಕಾರಣವೋ; ಹಕ್ಕುಪತ್ರ ವಿತರಣೆಯಲ್ಲಿ ಎದುರಾಗುತ್ತಿರುವ ಕಾನೂನಾತ್ಮಕ ಅಡೆತಡೆಗಳನ್ನು ನಿವಾರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; | ಸರ್ವೇ ಇಲಾಖೆಯಲ್ಲಿ FIFO ಪದ್ಧತಿ ಚಾಲ್ತಿಯಲ್ಲಿದ್ದು, ಸರ್ವೆ ದಾಖಲೆಗಳಂತೆ ಪಹಣಿ ಪತ್ರಿಕೆ ಹೊಂದಾಣಿಕೆ ಇದ್ದಲ್ಲಿ ವಿಳಂಬಕ್ಕೆ ಆಸ್ಪದ ನೀಡದೆ ನಿಗದಿತ ಸಮಯದಲ್ಲಿ ವಿಲೆಗೊಳಿಸಲಾಗುವುದು. ಭಾಲ್ಕಿ, ಬಸವಕಲ್ಯಾಣ ತಾಲ್ಲೂಕಿನಲ್ಲಿ ಸರ್ವೇಯರ್ ಗಳ ಹುದ್ದೆ ಹೆಚ್ಚಿನ ಸಂಖ್ಯೆಯಲ್ಲಿ ಖಾಲಿ ಇದ್ದು ಸರ್ವೇಯರಗಳ ಕೊರತೆ ಇರುತ್ತದೆ. |
| ಉ) | ಬೀದರ್ ಜಿಲ್ಲೆಯ ತಾಲ್ಲೂಕು ಕಚೇರಿಗಳಲ್ಲಿ ಮತ್ತು ಸರ್ವೆ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು; ವಿಶೇಷವಾಗಿ ಗ್ರಾಮೀಣ ಭಾಗದ ಸರ್ವೇ ಕೆಲಸಗಳ ವೇಗ ಹೆಚ್ಚಿಸಲು ಹೆಚ್ಚುವರಿ ಸಿಬ್ಬಂದಿ ಅಥವಾ ಗುತ್ತಿಗೆ ಆಧಾರದ ಮೇಲೆ ಸರ್ವೇಯರ್‌ಗಳನ್ನು ನೇಮಿಸಿಕೊಳ್ಳುವ ಯೋಜನೆ ಇದೆಯೇ? | ಬೀದರ್ ಜಿಲ್ಲೆಯ ತಾಲ್ಲೂಕು ಕಛೇರಿಗಳಲ್ಲಿ ಒಟ್ಟು 39 ಭೂಮಾಪಕರ ಹುದ್ದೆಗಳು ಖಾಲಿ ಇರುತ್ತವೆ.<br><br>ರಾಜ್ಯದಲ್ಲಿ ಶೀಘ್ರವಾಗಿ ಅಳತೆ ಕೆಲಸ ನಿರ್ವಹಿಸುವ ಸಲುವಾಗಿ 1000 ಜನ ಪರವಾನಗಿ ಭೂಮಾಪಕರ ಆಯ್ಕೆ ಪ್ರಕ್ರಿಯೆ ಚಾಲ್ತಿಯಲ್ಲಿದ್ದು, ಆಯ್ಕೆಯಾದ ಕೂಡಲೇ ಪರವಾನಗಿ ನೀಡಿ ವಿವಿಧ ತಾಲ್ಲೂಕುಗಳಿಗೆ ನಿಯೋಜಿಸಲಾಗುತ್ತದೆ.<br><br>ರಾಜ್ಯದಲ್ಲಿ ಉಳಿಕೆ ಮೂಲ ವೃಂದದಲ್ಲಿ 560 ಮತ್ತು ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದದಲ್ಲಿ 190 ಸರ್ಕಾರಿ |

| | | |
|---|---|---|
| | | ಭೂಮಾಪಕರ ಹುದ್ದೆಗಳನ್ನು ಭರ್ತಿ ಮಾಡಲು ಕರ್ನಾಟಕ ಲೋಕಸೇವಾ ಆಯೋಗದ ಅಧಿಸೂಚನೆ ಸಂಖ್ಯೆ: ಇ(2) 1023 & 1024/2024-25 ದಿನಾಂಕ:22-11-2024 ರಲ್ಲಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿತ್ತು.<br><br>ಕರ್ನಾಟಕ ಲೋಕಸೇವಾ ಆಯೋಗದ ಪತ್ರ : KPSCKA/ EXA2/ EXMF/ 4/2025-EXAM-2/ 1016 ರಲ್ಲಿ ಭರ್ತಿ ಮಾಡಲು ಹೊರಡಿಸಿರುವ ಅಧಿಸೂಚನೆಗಳನ್ನು ರದ್ದುಪಡಿಸಿ ಸರ್ಕಾರದ ಸುತ್ತೋಲೆ ಸಂಖ್ಯೆ: ಸಿ.ಆ.ಸು.ಇ 388 ಸೆ.ನೆ.ನಿ 2024, ದಿನಾಂಕ:06.09.2025 ರನ್ವಯ ಸರ್ಕಾರದ ಪ್ರಸ್ತುತ ಮೀಸಲಾತಿ ನಿಯಮಗಳನ್ವಯ ಎಲ್ಲಾ ಅಗತ್ಯ ದಾಖಲೆ/ಮಾಹಿತಿಗಳೊಂದಿಗೆ ಕರ್ನಾಟಕ ಲೋಕಸೇವಾ ಆಯೋಗದ ಆನ್ ಲೈನ್ ಸಾಫ್ಟ್‌ವೇರ್ ಮುಖಾಂತರ ಮರು ಪ್ರಸ್ತಾವನೆ ಸಲ್ಲಿಸುವಂತೆ ಕೋರಿರುತ್ತದೆ.<br><br>ಈ ಮಧ್ಯೆ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಾವಳಿಯನ್ನು ತಿದ್ದುಪಡಿ ಮಾಡುವ ಪ್ರಕ್ರಿಯೆಯು ಅಂತಿಮ ಹಂತದಲ್ಲಿದ್ದು ಅದರಂತೆ ಶೀಘ್ರವಾಗಿ 750 ಭೂಮಾಪಕರನ್ನು ನೇಮಕಾತಿ ಮಾಡಿಕೊಳ್ಳುವ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗುವುದು. |

**(ಕಡತ ಸಂಖ್ಯೆ:ಆರ್‌ಡಿ 13 ಎಲ್‌ಜಿಐ 2026)**

(ಕೃಷ್ಣ ಬೈರೇಗೌಡ)
ಕಂದಾಯ ಸಚಿವರು